ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ
DSERT
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3RD STAGE BENGALURU - 085
Phone : 080 26422372 26422373 26422374
Fax:26422377
Email: dsert.kar@nic.in Website : http://dsert.kar.nic.in

ಸಂಖ್ಯೆ: ರಾವಿಸಂ2. ವಿ.ವಿ.ಗೋಷ್ಠಿ. 2/2011–12. ದಿನಾಂಕ : 21–06–2011.

# ಸುತ್ತೋಲೆ

ವಿಷಯ:– 2011–12ನೇ ಸಾಲಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದಲ್ಲಿ ವಿಜ್ಞಾನ ವಿಚಾರ ಗೋಷ್ಠಿ ನಡೆಸುವ ಬಗ್ಗೆ.

ಉಲ್ಲೇಖ:– ಸರ್ಕಾರದ ಆದೇಶ ಸಂಖ್ಯೆ : ಇಡಿ 47. ಯೋಯೋಕ 2011. ಬೆಂಗಳೂರು. ದಿನಾಂಕ : 02–04–2011.

2. ವಿ.ಐ.ಟಿ.ಎಂ. ಬೆಂಗಳೂರ ಇವರ ಪತ್ರಸಂಖ್ಯೆ: VM24(18)EDEXT/ NSS 2011./1135. Dated : 30-05-2011.

*********

2010–11ನೇ ಸಾಲಿನಲ್ಲಿ ನಿಮ್ಮ ಜಿಲ್ಲೆಯಲ್ಲಿ ವಿಜ್ಞಾನ ವಿಚಾರ ಗೋಷ್ಠಿ ಕಾರ್ಯಕ್ರಮ ಆಯೋಜಿಸಲು ಸಹಕರಿಸಿದ್ದೀರಿ, ಇದಕ್ಕೆ ಧನ್ಯವಾದಗಳು. 2011–12ನೇ ಸಾಲಿನಲ್ಲಿಯೂ ಸಹ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಚಾರ ಗೋಷ್ಠಿಯನ್ನು ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಬೆಂಗಳೂರು ಇವರ ಸಹಯೋಗದೊಂದಿಗೆ ಏರ್ಪಡಿಸಲಾಗಿದೆ.

**ವಿಜ್ಞಾನ ವಿಚಾರ ಗೋಷ್ಠಿಯ ವಿಷಯ :–**

**"CHEMISTRY FOR HUMAN WELFARE : PROMISES AND CONCERNS"**

**"ಮಾನವ ಕಲ್ಯಾಣಕ್ಕಾಗಿ ರಾಸಾಯನ ವಿಜ್ಞಾನ : ಆಶಯಗಳು ಮತ್ತು ಚಿಂತನೆಗಳು"**

- ವಿಜ್ಞಾನ ವಿಚಾರ ಗೋಷ್ಠಿಯ ವಿಷಯ, ಈ ಕಾರ್ಯಕ್ರಮವನ್ನು ಶಾಲಾ ಬ್ಲಾಕ್, ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ನಡೆಸಲಾಗುವುದು. ಜಿಲ್ಲಾ ಮಟ್ಟದಲ್ಲಿ ಆಯಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಇವರು ಸದರಿ ಕಾರ್ಯಕ್ರಮವನ್ನು ಆಯೋಜಿಸಬೇಕು.
- ರಾಜ್ಯದಲ್ಲಿ ಸರ್ಕಾರಿ, ಅನುದಾನಿತ, ಅನುದಾನ ರಹಿತ ಹಾಗೂ ಮಾನ್ಯತೆ ಪಡೆದ ಶಾಲೆಗಳಲ್ಲಿ ಎಂಟರಿಂದ ಹತ್ತನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.
- ಶಾಲಾ ಮಟ್ಟದ ಗೋಷ್ಠಿಯನ್ನು ಜುಲೈ 15 ರೊಳಗೆ ನಡೆಸಿ, ಅರ್ಹ ವಿದ್ಯಾರ್ಥಿಯನ್ನು ಆಯ್ಕೆ ಮಾಡಿ ಬ್ಲಾಕ್ ಮಟ್ಟದ ವಿಜ್ಞಾನ ವಿಚಾರ ಗೋಷ್ಠಿಗೆ ಕಳುಹಿಸುವಂತೆ ತಮ್ಮ ವ್ಯಾಪ್ತಿಯಲ್ಲಿನ ಪ್ರೌಢಶಾಲೆಗಳಿಗೆ ಉಪ ನಿರ್ದೇಶಕರು (ಆಡಳಿತ) ಸೂಕ್ತ ಮಾಹಿತಿಯನ್ನು ಸುತ್ತೋಲೆ ಮೂಲಕ ನೀಡುವುದು.
- ಬ್ಲಾಕ್ ಮಟ್ಟದ ವಿಜ್ಞಾನ ವಿಚಾರ ಗೋಷ್ಠಿಯನ್ನು ದಿನಾಂಕ : 25–07–2011ರ ಒಳಗಾಗಿ ಪೂರ್ಣಗೊಳಿಸಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದವರನ್ನು ಜಿಲ್ಲಾ ಹಂತಕ್ಕೆ ಕಳುಹಿಸುವುದು.
- ತಾಲ್ಲೂಕು ಮಟ್ಟದ ಸ್ಪರ್ಧೆಗೆ ಹಾಜರಾಗಲಿರುವ ವಿದ್ಯಾರ್ಥಿಗಳು ಮತ್ತು ಮತ್ತು ಅವರನ್ನು ಕರೆತರುವ, ಒಬ್ಬ ಶಿಕ್ಷಕರಿಗೆ ವಾಸ್ತವ ಪ್ರಯಾಣ ಭತ್ಯೆಯನ್ನು ಶಾಲಾ ಸಂಚಿತ ನಿಧಿಯಿಂದ ಭರಿಸಿಕೊಳ್ಳಲು ಅನುಮತಿ ನೀಡಬಹುದಾಗಿದೆ. (ದಿನಭತ್ಯೆ ಪಡೆಯುವಂತಿಲ್ಲ.)

- ಜಿಲ್ಲಾ ಮಟ್ಟದ ವಿಜ್ಞಾನ ವಿಚಾರ ಗೋಷ್ಠಿಯನ್ನು ದಿನಾಂಕ : 05–08–2011ರ ಒಳಗಾಗಿ ನಡೆಸಿ, ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿಯ ಹೆಸರು, ಸಂಪರ್ಕ ಸಂಖ್ಯೆ, ಶಾಲೆಯ ಪೂರ್ಣ ವಿಳಾಸವನ್ನು ದಿನಾಂಕ: 10–08–2011ರ ಒಳಗಾಗಿ ಈ ನಿರ್ದೇಶನಾಲಯಕ್ಕೆ ತಲುಪುವಂತೆ ಕಳುಹಿಸುವುದು.

- ಜಿಲ್ಲಾ ಮಟ್ಟದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ವಿದ್ಯಾರ್ಥಿ / ವಿದ್ಯಾರ್ಥಿನಿಯನ್ನು ತಪ್ಪದೇ ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಲು ತಿಳಿಸುವುದು. ರಾಜ್ಯ ಮಟ್ಟದ ವಿಜ್ಞಾನ ವಿಚಾರ ಗೋಷ್ಠಿಯನ್ನು ಆಗಸ್ಟ್ 2011ರ ಕೊನೆಯ ವಾರದಲ್ಲಿ ನಡೆಸಲಾಗುವುದು.

- ರಾಷ್ಟ್ರ ಮಟ್ಟದ ವಿಜ್ಞಾನ ವಿಚಾರ ಗೋಷ್ಠಿಯು ದಿನಾಂಕ : ಅಕ್ಟೋಬರ್–2011 ರಲ್ಲಿ ನ್ಯಾಷನಲ್ ಸೈನ್ಸ್ ಸೆಂಟರ್, ಗೇಟ್ ನಂಬರ್–2 ರ ಹತ್ತಿರ, ಪ್ರಗತಿ ಮೈದಾನ, ನವದೆಹಲಿ–110001 ಇಲ್ಲಿ ನಡೆಯಲಿದೆ.

ಇದು ಒಂದು ಕಾಲಮಿತಿ ಕಾರ್ಯಕ್ರಮವಾಗಿದ್ದು, ಎಲ್ಲಾ ಉಪ ನಿರ್ದೇಶಕರು (ಆಡಳಿತ) ಕೂಡಲೇ ಕ್ರಮ ಕೈಗೊಂಡು ನಿಗಧಿತ ಸಮಯದಲ್ಲಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿ, ಕಾರ್ಯಕ್ರಮದ ಹಣ ಸೆಳೆದ ಕೂಡಲೇ ಖಜಾನೆ ಚೆಕ್ ನಂಬರ್ ದಿನಾಂಕವನ್ನು ಈ ಕಛೇರಿಗೆ ನಿಗಧಿಪಡಿಸಿದ ದಿನಾಂಕದೊಳಗೆ ವರದಿಯನ್ನು ಈ ನಿರ್ದೇಶನಾಲಯಕ್ಕೆ ಸಲ್ಲಿಸುವುದು. ಹಾಗೂ ಎನ್.ಡಿ.ಸಿ. ಬಿಲ್ಲು ಹಾಗೂ ವೋಚರ್‌ಗಳ ಸಹಿತ ಮೇಲು ಸಹಿಗಾಗಿ ಕಾರ್ಯಕ್ರಮ ಮುಗಿದ ಕೂಡಲೇ ದ್ವಿಪ್ರತಿಗಳಲ್ಲಿ (ಮೂಲ ಹಾಗೂ ಜೆರಾಕ್ಸ್ ವೋಚರ್‌ಗಳನ್ನು) ಸಲ್ಲಿಸುವುದು. ವಿಳಂಬವಾಗಿ ಬಂದ ಎನ್.ಡಿ.ಸಿ. ಬಿಲ್ಲುಗಳಿಗೆ ಈ ನಿರ್ದೇಶನಾಲಯದಿಂದ ಮೇಲು ಸಹಿ ಮಾಡುವುದಿಲ್ಲ. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸತಕ್ಕದ್ದು.

**ವಿಜ್ಞಾನ ವಿಚಾರ ಗೋಷ್ಠಿಯ ನಿಬಂಧನೆಗಳು:–**

**ಭಾಷೆ:** ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ವಿಷಯ ಮಂಡಿಸಬಹುದಾಗಿದೆ.

**ಕಾಲಾವಕಾಶ :** ಪ್ರತಿ ವಿದ್ಯಾರ್ಥಿಗೆ ವಿಷಯ ಮಂಡನೆಗೆ ಗರಿಷ್ಠ 6 ನಿಮಿಷಗಳ ಕಾಲಾವಕಾಶ ನೀಡಲಾಗುವುದು. ಇದಾದ ನಂತರ 2 ನಿಮಿಷಗಳು ನಿರ್ಣಾಯಕರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲು ನಿಗಧಿಯಾಗಿರುತ್ತದೆ. ಪ್ರತಿ ವಿದ್ಯಾರ್ಥಿಗೆ ತೀರ್ಪುಗಾರರು 3 ಪ್ರಶ್ನೆಗಳನ್ನು ಕೇಳುವರು. ವಿದ್ಯಾರ್ಥಿಯು ಕನಿಷ್ಠ 2 ಪ್ರಶ್ನೆಗಳಿಗಾದರೂ ಉತ್ತರ ನೀಡಬೇಕಾಗುತ್ತದೆ.

- ಭಾಗವಹಿಸುವವರು : ರಾಜ್ಯದ ಎಲ್ಲಾ 8 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರೌಢಶಾಲಾ ವಿದ್ಯಾರ್ಥಿ / ವಿದ್ಯಾರ್ಥಿನಿಯರು

**ಅಂಕಗಳ ವಿಂಗಡನೆ :**

| ಕ್ರ.ಸ. | ವಿಷಯ | ಅಂಕಗಳು |
|---|---|---|
| 1 | ವಿಷಯ ಮಂಡನೆಯಲ್ಲಿ ವೈಜ್ಞಾನಿಕ ವಸ್ತು ವಿಷಯ (Scientific Content in Presentation) | 40 ಅಂಕಗಳು |
| 2 | ಭಾಷಾ ನಿರರ್ಗಳತೆ (Fluency in Speech) | 25 ಅಂಕಗಳು |
| 3 | ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ<br>(ಅ) 20 ಪ್ರಶ್ನೆಗಳ ಲಿಖಿತ ಪರೀಕ್ಷೆ – ಗರಿಷ್ಠ 20 ನಿಮಿಷಗಳು.<br>(A Written Aptitude Test of)(Maximum 20 Minutes)<br>(ಆ)ವಿಷಯ ಮಂಡನೆಯ ನಂತರ ಮೌಖಿಕವಾಗಿ ಉತ್ತರಿಸುವುದು (3 ಪ್ರಶ್ನೆಗಳಲ್ಲಿ 2)<br>(Answer to Oral Question on the spot after presentation-2 out of 3 questions) | 10 ಅಂಕಗಳು<br>10 ಅಂಕಗಳು |
| 4 | ದೃಶ್ಯ ಉಪಕರಣಗಳ ಬಳಕೆ ವೈವಿಧ್ಯತೆ<br>(Novelty in use of visuals) | 15 ಅಂಕಗಳು |
| | **ಒಟ್ಟು** | **100 ಅಂಕಗಳು** |

**ದೃಶ್ಯ ಉಪಕರಣಗಳ ಬಳಕೆ:-**

**1. ಚಾರ್ಟುಗಳು ಮತ್ತು ಪೋಸ್ಟರ್‌ಗಳು:-** 850 MM (ಅಗಲ) X 600MM (ಎತ್ತರ) ಅಳತೆಯ ಕಾಗದದ ಅಥವಾ ಬಟ್ಟೆಯಲ್ಲಿ ತಯಾರಿಸಿದ ಚಾರ್ಟ್ ಮತ್ತು ಪೋಸ್ಟರ್‌ಗಳನ್ನು ನೀಡಿರುವ ಕಾಲಾವಕಾಶದಲ್ಲಿ ಬಳಸಬಹುದಾಗಿದೆ. 3 ಆಯಾಮದ ಮಾದರಿಗಳ (Three dimensional models) ಪ್ರದರ್ಶನಕ್ಕೆ ಅವಕಾಶವಿರುವುದಿಲ್ಲ. ಎಲ್ಲಾ ಚಾರ್ಟ್ ಮತ್ತು ಪೋಸ್ಟರ್‌ಗಳು ಒಂದೇ ಅಳತೆಯನ್ನು ಹೊಂದಿರಬೇಕು. ಕ್ಯಾಲೆಂಡರಿನ ಹಾಳೆಗಳಂತೆ ಒಂದರ ಮೇಲೊಂದು ಜೋಡಿಸಿ ನಿಗಧಿತ ಅವಧಿಯಲ್ಲಿ ಪ್ರದರ್ಶಿಸುವುದು ಗೋಷ್ಠಿಯ ಅವಧಿಯಲ್ಲಿ ಒಬ್ಬ ವಿದ್ಯಾರ್ಥಿ ಪ್ರದರ್ಶಿಸಬಹುದಾದ ಚಾರ್ಟುಗಳು ಅಥವಾ ಪೋಸ್ಟರ್‌ಗಳ ಸಂಖ್ಯೆ 5ಕ್ಕಿಂತ ಹೆಚ್ಚಿರಬಾರದು ಅಥವಾ ಓ.ಹೆಚ್.ಪಿ. ಪಾರದರ್ಶಿಕೆ ಅಥವಾ 35 ಎಂ.ಎಂ. ಸ್ಲೈಡುಗಳ ಸಂಖ್ಯೆ ಒಟ್ಟಾರೆಯಾಗಿ ಐದಕ್ಕಿಂತ ಹೆಚ್ಚಿರಬಾರದು. ವೀಡಿಯೋ ಚಿತ್ರಗಳ ಪ್ರದರ್ಶನಕ್ಕೆ ಅವಕಾಶವಿರುವುದಿಲ್ಲ.

ವಿಷಯ ಮಂಡನೆಯಲ್ಲಿ ಸಮಯದಲ್ಲಿ ವಿದ್ಯಾರ್ಥಿಗೆ ಸಹಾಯ ಮಾಡಲು ಶಿಕ್ಷಕರಿಗೆ ಅಥವಾ ಜೊತೆಗೆ ಬಂದವರಿಗೆ ಅವಕಾಶ ನೀಡಬಾರದು.

2. 35 MM ಅಳತೆಯ ಪ್ಲಾಸ್ಟಿಕ್ ಫ್ರೇಮ್ ಮೇಲೆ ಅಳವಡಿಸಿದ ಸ್ಲೈಡ್‌ಗಳು (5ಕ್ಕಿಂತ ಹೆಚ್ಚಿರಬಾರದು).
3. ಎ4 ಅಳತೆಯ ಒಹೆಚ್‌ಪಿ ಸ್ಲೈಡ್‌ಗಳು (5ರ ಮಿತಿ)
4. ಕಂಪ್ಯೂಟರ್ ಆಧಾರಿತ ಸ್ಥಿರ ಸ್ಲೈಡ್‌ಗಳು (Office-2007 PPSX & PPTX Formate) ಇದಕ್ಕೆ ಪೂರಕ ಅಂಶಗಳನ್ನು ಸೇರಿಸಬಾರದು. ಉದಾ:- ಅನಿಮೇಷನ್, Pop-ups, Roll-overs ಇತ್ಯಾದಿ (5ರ ಮಿತಿ) ತಾಲ್ಲೂಕು ಮತ್ತು ಜಿಲ್ಲಾ ಹಂತದ ಸ್ಪರ್ಧೆಗೆ ಅಗತ್ಯ ಪೂರ್ವ ಸಿದ್ದತೆಗಳನ್ನು ಮಾಡಿಕೊಂಡಿರಬೇಕು. ಕಂಪ್ಯೂಟರ್ ಎಲ್.ಸಿ.ಡಿ. ಪ್ರೊಜೆಕ್ಟರ್, ಒ.ಹೆಚ್.ಪಿ. ಇವುಗಳ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು.

**ಸೂಚನೆ:-** 3ಡಿ ಮಾಡಲ್ಸ್, ವೀಡಿಯೋ ಮತ್ತು ಫಿಲ್ಮ್‌ಗಳನ್ನು ಕಾರ್ಯಕ್ರಮದಲ್ಲಿ ಪ್ರದರ್ಶಿಸಲು ನಿಷೇಧಿಸಿದೆ.

**ತೀರ್ಪುಗಾರರ ನೇಮಕ :** 3 ಮಂದಿ ತೀರ್ಪುಗಾರರನ್ನು ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳೀಯ ಕಾಲೇಜು ವಿಶ್ವ ವಿದ್ಯಾಲಯ ಅಥವಾ ಸಂಶೋಧನಾ ಕೇಂದ್ರಗಳಿಂದ ತಜ್ಞರನ್ನು ಆಯ್ಕೆ ಮಾಡುವುದು. ವಿದ್ಯಾರ್ಥಿಗಳು ಸ್ಪರ್ಧಿಸುವ ಸಂಸ್ಥೆಗಳಿಂದ ತೀರ್ಪುಗಾರರನ್ನು ಆಯ್ಕೆ ಮಾಡಬಾರದು.

ರಾಜ್ಯ ಮಟ್ಟದ ಸ್ಪರ್ಧೆ ಸ್ಪರ್ಧೆಯು ಆಗಸ್ಟ್ 2011 ರಲ್ಲಿ ನಡೆಯಲಿದ್ದು, ನಿರ್ದಿಷ್ಟ ದಿನಾಂಕ ಮತ್ತು ಸ್ಥಳವನ್ನು ನಂತರ ತಿಳಿಸಲಾಗುವುದು. ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಯ ಹೆಸರು (ಶಾಲಾ ವಿಳಾಸ ಸಹಿತ) ಈ ನಿರ್ದೇಶನಾಲಯಕ್ಕೆ ಕಳುಹಿಸುವಾಗ, **ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿದ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಅಂಕಿ-ಸಂಖ್ಯೆಯನ್ನು ಸಹ ಕಳುಹಿಸುವುದು.**

ಜಿಲ್ಲಾ ಮಟ್ಟದ ಸ್ಪರ್ಧೆಯ ನಿರ್ವಹಣಾ ವೆಚ್ಚಕ್ಕಾಗಿ ರೂ. 8,000/- ಗಳನ್ನು ಮಂಜೂರು ಮಾಡಲಾಗಿದೆ. ಈ ಬಗ್ಗೆ ಪ್ರತ್ಯೇಕ ಆದೇಶವನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಅನುದಾನವನ್ನು ಈ ಕೆಳಕಂಡ ವಿವರಗಳಂತೆ ಖರ್ಚು ಮಾಡುವುದು. ಅವಶ್ಯವಿದ್ದಲ್ಲಿ ಒಂದು ಶೀರ್ಷಿಕೆಯಿಂದ ಇನ್ನೊಂದು ಶೀರ್ಷಿಕೆಗೆ ಖರ್ಚಿನ ಬಾಬ್ತು ಹೊಂದಾಣಿಯನ್ನು ತಮ್ಮ ಹಂತದಲ್ಲಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಬಹುಮಾನದ ಬಾಬ್ತಿನಲ್ಲಿ ಮಾತ್ರ ಯಾವುದೇ ಬದಲಾವಣೆ ಮಾಡಕೂಡದು.

| ಕ್ರ.ಸ. | **ಖರ್ಚಿನ ಶೀರ್ಷಿಕೆ (ವಿವರ)** | **ಮೊತ್ತ** |
|---|---|---|
| 1 | ಬಹುಮಾನ<br>ಪ್ರಥಮ<br>ದ್ವಿತೀಯ<br>ತೃತೀಯ | ರೂ. 600-00<br>ರೂ. 500-00<br>ರೂ. 400-00<br>ಒಟ್ಟು ರೂ. 1500-00 |
| 2 | ತೀರ್ಪುಗಾರರ ಸಂಭಾವನೆ 500 X 3 | ರೂ. 1500-00 |
| 3 | ಟೈಮ್ ಕೀಪರ್ ಸಂಭಾವನೆ. | ರೂ. 400-00 |
| 4 | ಸಂಯೋಜಕರ ಸಂಭಾವನೆ | ರೂ. 500-00 |
| 5 | ಲಘು ಉಪಹಾರ ಮತ್ತು ಕಾಫೀ/ಟೀ (ಸ್ಪರ್ಧಿಗಳು, ಅವರನ್ನು ಕರೆತರುವ ಶಿಕ್ಷಕರು, ಟೈಮ್ ಕೀಪರ್, ತೀರ್ಪುಗಾರರು, ಸಂಯೋಜಕರು ಮತ್ತು ಸಹಾಯಕ ಸಿಬ್ಬಂದಿಗೆ ಮಾತ್ರ. | ರೂ. 1500-00 |
| 6 | ಎ. ವಿದ್ಯಾರ್ಥಿಗಳು ಮತ್ತು ಅವರನ್ನು ಕರೆತರುವ ಶಿಕ್ಷಕರಿಗೆ ಟಿ.ಎ. (ಡಿ.ಎ. ಇರುವುದಿಲ್ಲ.)<br>ಬಿ. ಮುದ್ರಣ, ಜೆರಾಕ್ಸ್, ಸಾದಿಲ್ವಾರು. ಒಟ್ಟಾರೆ<br>ಸಿ. ಕಾರ್ಯಕ್ರಮದ ಆಯೋಜನೆಗೆ.<br>ಡಿ. ದಾಖಲೀಕರಣ. | ರೂ. 2600-00 |
| | **ಒಟ್ಟು** | **ರೂ. 8,000-00** |

ವಿಜ್ಞಾನ ಗೋಷ್ಠಿಯ ಬಗ್ಗೆ ವ್ಯಾಪಕ ಪ್ರಚಾರ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಲು ಅನುವು ಮಾಡಿಕೊಡುವುದು. ಜಿಲ್ಲಾ ಮುಖ್ಯ ಶಿಕ್ಷಕರ, ಸಹ ಶಿಕ್ಷಕರ ಸಂಘಗಳಿಗೂ ಸಹ ಸುತ್ತೋಲೆ ಕಳುಹಿಸಿ, ಹೆಚ್ಚಿನ ಶಾಲೆಗಳು ಭಾಗವಹಿಸುವಂತೆ ಮಾಡುವುದು. ಕಾರ್ಯಕ್ರಮ ನಿರ್ವಹಿಸುವಲ್ಲಿ ಅನುಸರಿಸಬೇಕಾದ ನಿಯಮಗಳನ್ನು ತಪ್ಪದೇ ಪಾಲಿಸಬೇಕೆಂದು ತಿಳಿಸಿದೆ.

ಹಾಗೂ ಪೋಟೋ ಸಹಿತ ವರದಿಯನ್ನು ಈ ನಿರ್ದೇಶನಾಲಯಕ್ಕೆ ದಿನಾಂಕ : 10-08-2011ರ ಒಳಗಾಗಿ, ರಾಜ್ಯ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳ ಪಟ್ಟಿಯೊಂದಿಗೆ ಸಲ್ಲಿಸುವುದು.

**ನಿರ್ದೇಶಕರು,**

**ಡಿ.ಎಸ್.ಇ.ಆರ್.ಟಿ.**

**ಪ್ರತಿಯನ್ನು:-**

1. 34 ಶೈಕ್ಷಣಿಕ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ವಿಜ್ಞಾನ ಮತ್ತು ಗಣಿತ ವಿಷಯ ಪರಿವೀಕ್ಷಕರು, ಉಪ ನಿರ್ದೇಶಕರ ಕಛೇರಿಗೆ ಇವರಿಗೆ ಮಾಹಿತಿಗಾಗಿ.
3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ
DSERT
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3RD STAGE BENGALURU - 085
Phone : 080 26422372 26422373 26422374
Fax:26422377
Email: dsert.kar@nic.in Website : http://dsert.kar.nic.in

ಸಂಖ್ಯೆ: ರಾವಿಸಂ2. ವಿ.ವಿ.ಗೋಷ್ಠಿ. 2/2011–12. ದಿನಾಂಕ : 21–06–2011.

# ಜ್ಞಾಪನಾ

ವಿಷಯ:– 2011–12ನೇ ಸಾಲಿನಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಚಾರ ಗೋಷ್ಠಿ ಏರ್ಪಡಿಸುವ ಬಗ್ಗೆ.

ವಿಜ್ಞಾನಗೋಷ್ಠಿ ಏರ್ಪಡಿಸುವ ಬಗ್ಗೆ.

ಉಲ್ಲೇಖ:– ಸರ್ಕಾರದ ಆದೇಶ ಸಂಖ್ಯೆ : ಇಡಿ 47. ಯೋಯೋಕ 2011. ಬೆಂಗಳೂರು. ದಿನಾಂಕ : 02–04–2011.

********

**ಪ್ರಸ್ತಾವನೆ:–**

ಪ್ರತಿ ವರ್ಷದಂತೆ 2011–12ನೇ ಸಾಲಿನಲ್ಲಿಯೂ ಸಹ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಚಾರ ಗೋಷ್ಠಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಮೊದಲ ಹಂತವಾಗಿ ಜಿಲ್ಲಾ ಮಟ್ಟದಲ್ಲಿ ವಿಜ್ಞಾನ ವಿಚಾರ ಗೋಷ್ಠಿಯನ್ನು ಆಯಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಇವರು ಆಯೋಜಿಸಬೇಕಾಗಿರುತ್ತದೆ. ಜಿಲ್ಲಾ ಮಟ್ಟದಲ್ಲಿ ವಿಜ್ಞಾನ ವಿಚಾಗ ಗೋಷ್ಠಿ ಕಾರ್ಯಕ್ರಮದ ನಿರ್ವಹಣೆಗಾಗಿ ಪ್ರತಿ ಜಿಲ್ಲೆಗೆ ತಲಾ ರೂ. 8,000/– (ರೂ. ಎಂಟು ಸಾವಿರಗಳು ಮಾತ್ರ) ಗಳಂತೆ ಒಟ್ಟು 34 ಜಿಲ್ಲೆಗಳಿಗೆ ರೂ. 2,72,000/– (ಎರಡು ಲಕ್ಷದ ಎಪ್ಪತ್ತೆರಡು ಸಾವಿರಗಳು ಮಾತ್ರ) ಗಳನ್ನು ಲೆಕ್ಕ ಶೀರ್ಷಿಕೆ : 2202–80–800–0–06–059 (ಯೋಜನೆ) ಅಡಿಯಲ್ಲಿ ಬಿಡುಗಡೆ ಮಾಡಲಾಗಿದೆ. ಎ.ಸಿ. ಬಿಲ್ಲಿನಲ್ಲಿ ಸೆಳೆಯಲು ಎಲ್ಲಾ 34 ಶೈಕ್ಷಣಿಕ ಜಿಲ್ಲೆಗಳ ಉಪ ನಿರ್ದೇಶಕರು (ಆಡಳಿತ) ಇವರಿಗೆ ಅನುಮತಿ ನೀಡಲಾಗಿದೆ.

**ಆದೇಶ:–**

ಜಿಲ್ಲಾ ಮಟ್ಟದ ಕಾರ್ಯಕ್ರಮ ನಿರ್ವಹಣೆಗಾಗಿ ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಮತ್ತಿತರ ವೆಚ್ಚಗಳನ್ನು ಭರಿಸಲು ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಇವರಿಗೆ ರೂ. 8,000/– (ರೂ. ಎಂಟು ಸಾವಿರಗಳು ಮಾತ್ರ)ಗಳನ್ನು ಎ.ಸಿ.ಬಿಲ್ಲಿನಲ್ಲಿ ಡ್ರಾ ಮಾಡಲು ಅನುಮತಿ ನೀಡಲಾಗಿದೆ. ಲೆಕ್ಕಶೀರ್ಷಿಕೆ : 2202–80–800–0–06–059 (ಯೋಜನೆ) ರಡಿಯಲ್ಲಿ ಎ.ಸಿ. ಬಿಲ್ಲಿನ ಮೂಲಕ ಡ್ರಾ ಮಾಡಿ, ಕಾರ್ಯಕ್ರಮವನ್ನು ಪೂರ್ಣಗೊಳಿಸಿದ ನಂತರ ನಿಯಮಾನುಸಾರ ಎನ್.ಡಿ.ಸಿ. ಬಿಲ್ಲನ್ನು **ಮಹಾಲೇಖಪಾಲರಿಗೆ** ಸಲ್ಲಿಸುವುದು. ಹಾಗೂ ಒಂದು ಪ್ರತಿಯನ್ನು ಈ ಕಛೇರಿಗೂ ಸಹ ಸಲ್ಲಿಸುವುದು. ಡ್ರಾ ಮಾಡಿದ ಮೊತ್ತದಲ್ಲಿ ಉಳಿಕೆಯಾದಲ್ಲಿ ಸದರಿ ಮೊತ್ತವನ್ನು ಲೆಕ್ಕ ಶೀರ್ಷಿಕೆ: 0202–01–102–1–01 (ಸಾಮಾನ್ಯ ಶಿಕ್ಷಣ) ಖಾತೆಗೆ ಜಮೆ ಮಾಡಲು ತಿಳಿಸಿದೆ.

**ನಿರ್ದೇಶಕರು,**
**ಡಿ.ಎಸ್.ಇ.ಆರ್.ಟಿ.**

**ಪ್ರತಿಯನ್ನು:–**

1. ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು.
2. ರಾಜ್ಯದ ಎಲ್ಲಾ 34 ಶೈಕ್ಷಣಿಕ ಜಿಲ್ಲೆಗಳ ಉಪ ನಿರ್ದೇಶಕರು (ಆಡಳಿತ) ಇವರಿಗೆ ಮುಂದಿನ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಖಜಾನಾಧಿಕಾರಿಗಳಿಗೆ
4. ಕಛೇರಿ ಪ್ರತಿ.